# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 | ENGLISH DAILY | Subscription Yearly - Rs. - | FRIDAY | 21-1-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಎಪ್ರಿಲ್ 2021 – ಡಿಸೆಂಬರ್ 2021 ರ ಅವಧಿಯ ಭಾರತ ಖಾದ್ಯ ತೈಲ ಆಮದು ಮೌಲ್ಯ 75 ಶೇಕಡಾ ಹೆಚ್ಚಳ

2021 ಎಪ್ರಿಲ್ ನಿಂದ 2021 ಡಿಸೆಂಬರ್ ಅವಧಿಯಲ್ಲಿ ಭಾರತ ಆಮದು ಮಾಡಿದ ಖಾದ್ಯತೈಲದ ಮೌಲ್ಯ ರೂ.1,04,354 ಕೋಟಿ ಆಗಿದ್ದು ಇದು 2020 ರ ಇದೇ ಅವಧಿಯಲ್ಲಿ ರೂ. 59,543 ಕೋಟಿ ಆಗಿತ್ತೆಂದು ಖಾದ್ಯತೈಲ ಸಂಸ್ಕರಣೆ ಸಂಸ್ಥೆಯೊಂದು ಹೇಳಿದೆಯೆನ್ನಲಾಗಿದೆ. ಭಾರತದ ಖಾದ್ಯ ತೈಲ ಬಳಕೆಯ 60 ಶೇಕಡಾ ಆಮದು ಮೂಲಕ ಪೂರೈಕೆಯಾಗುತ್ತಿದೆಯೆನ್ನಲಾಗಿದೆ.

## ಕೇರಳದಲ್ಲಿ ಗೋಡಂಬಿ ಉದ್ಯಮ ಆಧುನೀಕರಣ ಮತ್ತು ಉತ್ಪಾದನೆ ವಿಕೇಂದ್ರಿಕರಣಕ್ಕೆ ಯೋಜನೆ

ಕೇರಳದಲ್ಲಿ ಗೋಡಂಬಿ ತಿರುಳು ಉತ್ಪಾದನೆಯ ಉದ್ಯಮಗಳನ್ನು ಆಧುನೀಕರಣಗೊಳಿಸಲು ಹಾಗೂ ಉತ್ಪಾದನೆಗಳ ವಿಕೇಂದ್ರೀಕರಣಕ್ಕೆ ಯೋಜನೆ ಕೈ ಗೊಳ್ಳಲಾಗುತ್ತಿದೆಯೆನ್ನಲಾಗಿದೆ.

## ಕೇರಳದಲ್ಲಿ ಗೋಡಂಬಿ ಹಣ್ಣಿನಿಂದ ಗೋವಾ ಫೆನ್ನಿ ಮಾದರಿಯಲ್ಲಿ ಪೇಯ ಉತ್ಪಾದನೆ

ಈ ವರ್ಷದಿಂದ ಕೇರಳದಲ್ಲಿ ಗೋವಾ ಫೆನ್ನಿ ಮಾದರಿಯಲ್ಲಿ **ಗೋಡಂಬಿ** ಹಣ್ಣಿನಿಂದ ಪೇಯ ತಯಾರಿಸಲಾಗುವುದೆನ್ನಲಾಗಿದೆ.

## ಟಾಂಜೇನಿಯಾದಲ್ಲಿ ಗೋಡಂಬಿ ತಿರುಳು ಉತ್ಪಾದನೆಗೆ ಆಧ್ಯತೆ

ಟಾಂಜೇನಿಯಾದಲ್ಲಿ ಕಚ್ಚಾ ಗೋಡಂಬಿ ರಫ್ತು ಕಡಿಮೆ ಮಾಡಿ ಹೆಚ್ಚಿನ ಪ್ರಮಾಣದಲ್ಲಿ ಸ್ಥಳೀಯವಾಗಿ ಗೋಡಂಬಿ ತಿರುಳು ಉತ್ಪಾದನೆಗೆ ಆಧ್ಯತೆ ನೀಡಿ ಉದ್ಯಮದ ಹಾಗೂ ಗೋಡಂಬಿಯಿಂದ ಹೆಚ್ಚಿನ ಲಾಭ ಪಡೆಯಲು ಅಲ್ಲಿನ ಸಚಿವರು ಕರೆ ನೀಡಿದ್ದಾರೆನ್ನಲಾಗಿದೆ. ದಕ್ಷಿಣ ಆಫ್ರಿಕಾದ ಹೆಚ್ಚಿನ ದೇಶಗಳು ಸ್ಥಳೀಯವಾಗಿ ಗೋಡಂಬಿ ತಿರುಳು ಉತ್ಪಾದಿಸಲು ಆಧ್ಯತೆ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಕಚ್ಚಾ ಗೋಡಂಬಿ ರಫ್ತು ಕಡಿಮೆಯಾಗುವ ಸಂಭವವಿದೆ